ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : ಪಪ್ರ : 2016–17 : ಜೂನ್ 18, 2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮದ ವಿವರ | ದಿನಾಂಕ: ಸಮಯ | ಸ್ಥಳ |
|---|---|---|---|
| 1. | ವಿಶ್ವ ಯೋಗ ದಿನಾಚರಣೆಯ ಮುನ್ನ ಉಪ ಯೋಗ ಪೂರ್ವಭಾವಿ ಕಾರ್ಯಕ್ರಮ<br><br>ಉದ್ಘಾಟನೆ :<br><br>ಶ್ರೀ ಯು. ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು<br><br>ಅಧ್ಯಕ್ಷತೆ :<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲ ಸೌಲಭ್ಯ ಮತ್ತು ಹಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು. | 19–06–2016<br>ಭಾನುವಾರ<br>ಬೆಳಿಗ್ಗೆ<br>7–30 ಗಂಟೆಗೆ | ಸರ್ ಕೆ ಶೇಷಾದ್ರಿ ಸ್ಮಾರಕ ಗ್ರಂಥಾಲಯದ ಮುಂಭಾಗ,<br>ಕಬ್ಬನ್‌ಉದ್ಯಾನ,<br>ಬೆಂಗಳೂರು–560 001. |

ವಿ. ಸೂ :

1. ಕಬ್ಬನ್ ಉದ್ಯಾನದ ಆವರಣದಲ್ಲಿ ಭಾನುವಾರಗಳು ವಾಹನಗಳಿಗೆ ಪ್ರವೇಶ ನಿಷೇಧ ಇರುವ ಹಿನ್ನೆಲೆಯಲ್ಲಿ ಕಾರ್ಯಕ್ರಮ ಚಿತ್ರೀಕರಿಸಲು ಆಗಮಿಸುವ ಮಾಧ್ಯಮ ಪ್ರತಿನಿಧಿಗಳು ತಮ್ಮ ವಾಹನಗಳನ್ನು ಉದ್ಯಾನದ ಹೊರಗೆ ನಿಲುಗಡೆ ಮಾಡಬೇಕಾಗುತ್ತದೆ.
2. ನೇರ ಪ್ರಸಾರ ಮಾಡಲು ಇಚ್ಛಿಸುವ ವಾಹಿನಿಗಳು ಬ್ಯಾಕ್ ಪ್ಯಾಕ್ ಬಳಸುವುದು ಸೂಕ್ತ.
3. ಹೊರಾಂಗಣ ಚಿತ್ರೀಕರಣ ವಾಹನಗಳು ಹಾಗೂ ಸ್ಥಳದಲ್ಲಿ ಸಂಗ್ರಹಿಸುವ ವಾಹನಗಳನ್ನು ಕಸ್ತೂರಬಾ ರಸ್ತೆಯಲ್ಲಿ ನಿಲುಗಡೆ ಮಾಡಬಹುದು.
4. ಯೋಗ ಮಾಡಲು ಆಗಮಿಸುವ ಸಾರ್ವಜನಿಕರು ಆಯೋಜಕರು ನೀಡುವ ಪರಿಸರ ಸ್ನೇಹಿ ಚೀಲಗಳಲ್ಲಿ ತಮ್ಮ ಪಾದರಕ್ಷೆಗಳನ್ನು ಶೇವಣಿ ಇರಿಸಿ, ಕಾರ್ಯಕ್ರಮದ ನಂತರ ಮರಳಿ ಪಡೆಯಬಹುದು.

ಡಿ. ಪಿ. ಮುರಳೀಧರ್
ಉಪ ನಿರ್ದೇಶಕರು (ವಾರ್ತೆ)

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 2 | 2 ನೇ ವಿಶ್ವಯೋಗ ದಿನಾಚರಣೆ :<br><br>ಉದ್ಘಾಟನೆ:<br><br>ನಾಗಮೋಹನ್ ದಾಸ್,<br>ನಿವೃತ್ತ ನ್ಯಾಯಾಧೀಶರು,<br>ಬೆಂಗಳೂರು<br><br>ಮುಖ್ಯ ಅತಿಥಿ:<br><br>ಎನ್.ಎಸ್. ಮೇಘರಿಕ್,<br>ಬೆಂಗಳೂರು ಮಹಾನಗರ ಪೊಲೀಸ್ ಆಯುಕ್ತರು,<br>ಕರ್ನಾಟಕ ಸರ್ಕಾರ<br><br>ಅಧ್ಯಕ್ಷತೆ:<br><br>ಪಿ.ಜಿ.ಆರ್. ಸಿಂಧ್ಯ,<br>ರಾಜ್ಯ ಮುಖ್ಯ ಆಯುಕ್ತರು,<br>ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ | 20-06-2016<br>ಸೋಮವಾರ<br>ಮಧ್ಯಾಹ್ನ<br>3-30 ಗಂಟೆಗೆ | ಕೊಂಡಜ್ಜಿ ಬಸಪ್ಪ ಭವನ,<br>ಶಾಂತಿಗೃಹ, ಅರಮನೆ ರಸ್ತೆ,<br>ಬೆಂಗಳೂರು – 560 001 |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ವಿಧಾನ ಮಂಡಲದ ಅಧಿವೇಶನ

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಮಂಡಲದ (ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ) ಅಧಿವೇಶನವು ಜುಲೈ 4 ರಂದು ಬೆಳಿಗ್ಗೆ 11-00 ಗಂಟೆಗೆ ಆರಂಭವಾಗಲಿದೆ. ಜುಲೈ 29 ರವರೆಗೆ ಅಧಿವೇಶನಗಳು ಜರುಗಲಿದ್ದು, ರಂಜಾನ್ ಹಬ್ಬದ ಸಾರ್ವಜನಿಕ ರಜಾ ದಿನವಾದ ಜುಲೈ 6 ಮತ್ತು ಎಲ್ಲಾ ಶನಿವಾರ ಮತ್ತು ಭಾನುವಾರಗಳಂದು ವಿಧಾನ ಮಂಡಲದ ಅಧಿವೇಶನ ಇರುವುದಿಲ್ಲ. ಉಳಿದ 19 ದಿನಗಳ ಅಧಿವೇಶನದಲ್ಲಿ ಸರ್ಕಾರಿ ಹಾಗೂ ಖಾಸಗಿ ಕಾರ್ಯಕಲಾಪಗಳು ನಡೆಯಲಿವೆ.

ಬಾಬು::ಜಿಪಿಆರ್

# ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಆಯುಕ್ತರ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಅಂಗವಿಕಲರ ಆಯುಕ್ತಾಲಯಕ್ಕೆ ಆಯುಕ್ತರನ್ನು ನೇಮಕಾತಿ ಮಾಡಲು ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನೋಂದಾಯಿತ ಅಂಚೆ ಸ್ವೀಕೃತಿ ಮೂಲಕ ಅರ್ಜಿ ಸಲ್ಲಿಸಲು ಜುಲೈ 5 ಕೊನೆಯ ದಿನವಾಗಿದೆ. ಅರ್ಜಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, 1ನೇ ಮಹಡಿ, 3ನೇ ಗೇಟ್, ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001 ಇವರಿಗೆ ಸಲ್ಲಿಸಬೇಕು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ www.welfareofdisabled.kar.nic.in ನಿಂದ ಪಡೆಯಬಹುದು.

ಬಾಬು::ಜಿಪಿಆರ್

# ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮಂಜೂರಾತಿ : ಅವಧಿ ವಿಸ್ತರಣೆ

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)

2014–15 ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳ ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯು ಪ್ರೋತ್ಸಾಹ ಧನ ಮಂಜೂರು ಮಾಡಲಿದೆ.

ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ರೂ. 20,000/ ಪದವಿ ಪರೀಕ್ಷೆ ಉತ್ತೀರ್ಣರಾದವರಿಗೆ ರೂ 25,000– ಸ್ನಾತಕೋತ್ತರ ಪದವಿಯಲ್ಲಿ ಉತ್ತೀರ್ಣರಾದವರಿಗೆ ರೂ. 30,000/– ಹಾಗೂ ಕೃಷಿ, ಇಂಜಿನೀಯರಿಂಗ್, ವೈದ್ಯಕೀಯ ಮತ್ತು ಪಶುವೈದ್ಯದಲ್ಲಿ ಉತ್ತೀರ್ಣರಾದವರಿಗೆ ರೂ. 35,000/– ಗಳ ಪ್ರೋತ್ಸಾಹ ಧನ ಮಂಜೂರು ಮಾಡಲಾಗುವುದು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಇದ್ದ ಕೊನೆಯ ದಿನಾಂಕವನ್ನು ಜೂನ್ 30 ರವರೆಗೆ ವಿಸ್ತರಿಸಲಾಗಿದೆ.

ಬಾಬು::ಜಿಪಿಆರ್

# ಸಾವಯವ ತಾರಸಿ ಮತ್ತು ಕೈತೋಟ ಅಭಿವೃದ್ಧಿ

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)

ತೋಟಗಾರಿಕೆ ಇಲಾಖೆಯ ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು ಇಲ್ಲಿ ಜೂನ್ 25 ರಂದು "ಸಾವಯವ ತಾರಸಿ ಮತ್ತು ಕೈ ತೋಟ ಅಭಿವೃದ್ಧಿ" ಬಗ್ಗೆ ತರಬೇತಿ ಕಾರ್ಯಕ್ರಮವನ್ನು ನಗರವಾಸಿಗಳಿಗೆ/ರೈತರಿಗೆ/ಸಾರ್ವಜನಿಕರಿಗೆ/ವಿದ್ಯಾರ್ಥಿಗಳಿಗೆ ಒಂದು ದಿನದ ತರಬೇತಿಯನ್ನು ನೀಡಲಾಗುವುದು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ರೂ.300/- ಗಳನ್ನು ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು ರವರ ಕಚೇರಿಯಲ್ಲಿ ತರಬೇತಿಯ ಒಂದು ಮುಂಚಿತವಾಗಿ ನೊಂದಣಿಯನ್ನು ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 26582775, 26584904, ಇ-ಮೇಲ್ : **Sadh.co2014@gmail.com, biocentre.hulimavu@gmail.com.**

ಬಾಬು::ಜಿಪಿಆರ್

# ಪುಸ್ತಕ ಬಹುಮಾನಕ್ಕಾಗಿ ಕೃತಿಗಳ ಆಹ್ವಾನ

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರತಿ ವರ್ಷದಂತೆ 2015ನೇಯ ವರ್ಷದ ಪುಸ್ತಕ ಬಹುಮಾನ ಯೋಜನೆಗಾಗಿ ಈ ವಿವಿಧ ಪ್ರಕಾರಗಳ ಕನ್ನಡ ಪುಸ್ತಕಗಳನ್ನು ಆಹ್ವಾನಿಸಿದೆ. ಪ್ರತಿ ಪ್ರಕಾರದಲ್ಲಿ ವಿಮರ್ಶಕರು ಆಯ್ಕೆ ಮಾಡುವ ಒಂದು ಕೃತಿಗೆ ಬಹುಮಾನ ನೀಡಲಾಗುವುದು. ಬಹುಮಾನಕ್ಕೆ ಸಲ್ಲಿಸುವ ಕೃತಿಗಳು 2015 ರ ಜನವರಿ 1 ರಿಂದ 2015 ರ ಡಿಸೆಂಬರ್ 31 ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರುವ ಕೃತಿಗಳಾಗಿರಬೇಕು. ಕೃತಿಯ ತಾಂತ್ರಿಕ ಪುಟದಲ್ಲಿ ಪ್ರಥಮ ಮುದ್ರಣ 2015 ಎಂದು ಮುದ್ರಿತವಾಗಿರಬೇಕು.

ಈ ಅವಧಿಯಲ್ಲಿ ಪ್ರಕಟವಾದ ಪುಸ್ತಕಗಳ ಒಂದೊಂದು ಪ್ರತಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು – 560 002 ಇವರಿಗೆ ರಿಜಿಸ್ಟರ್ಡ್ ಅಂಚೆ/ಕೊರಿಯರ್ ಮೂಲಕ ಅಥವಾ ಖುದ್ದಾರಿ 2016 ರ ಜುಲೈ 10 ರೊಳಗೆ ತಲುಪಿಸಬೇಕಾಗಿ ಕೋರಿದೆ. ಕಳುಹಿಸಲ್ಪಡುವ ಕೃತಿಯು ವಿವಿಧ ಪ್ರಕಾರಗಳಲ್ಲಿ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಪುಸ್ತಕದ ಶೀರ್ಷಿಕೆ ಪುಟದಲ್ಲಿ ಬರೆದಿರಬೇಕು.

ಬಾಬು::ಜಿಪಿಆರ್

# ರಫ್ತು ನಿರ್ವಹಣಾ ತರಬೇತಿ

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ಕರ್ನಾಟಕ ಸರ್ಕಾರದ ಸಂಸ್ಥೆಯಾಗಿದ್ದು, ಇವರು 6 ದಿನಗಳ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಜುಲೈ 11 ರಿಂದ 16 ರವರೆಗೆ ಬೆಂಗಳೂರಿನಲ್ಲಿ ಆಯೋಜಿಸಲು ಉದ್ದೇಶಿಸಿರುತ್ತಾರೆ.

ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತುದಾರರನ್ನು ರಫ್ತು ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸುವ ಮೂಲಕ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ರಫ್ತು ವ್ಯಾಪಾರವನ್ನು ಪ್ರಾರಂಭಿಸಲು ಆಸಕ್ತಿಯುಳ್ಳ ಕೈಗಾರಿಕೆಗಳು / ಭಾವಿ ರಫ್ತುದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿ.ಟಿ.ಪಿ.ಸಿ. ಕಚೇರಿಯಲ್ಲಿ ನೊಂದಣಿಯನ್ನು ಮಾಡಿಸಬೇಕು.

ತರಬೇತಿಯು ವಿ.ಟಿ.ಪಿ.ಸಿ. ಟ್ರೈನಿಂಗ್ ಹಾಲ್, ಬಿ.ಎಂ.ಟಿ.ಸಿ. ಕಟ್ಟಡ, 'ಎ' ಬ್ಲಾಕ್, 3ನೇಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರುನಲ್ಲಿ ನಡೆಯಲಿದೆ.

ಹೆಚ್ಚಿನ ವಿವರಕ್ಕಾಗಿ ದಯವಿಟ್ಟು ಸಿ.ಎಸ್. ಭಾಸ್ಕರ್, ವಿ.ಟಿ.ಪಿ.ಸಿ. ಇವರನ್ನು ಮೊ. 98809582018 ನಲ್ಲಿ ಸಂಪರ್ಕಿಸಬಹುದು.

ಬಾಬು::ಜಿಪಿಆರ್

# Export Management Training

**Bengaluru, June 18th (Karnataka Information)**

**Visvesvaraya Trade Promotion Centre, a Govt. of Karnataka Organisation for promotion of exports in the State is organizing 6 days Export Management Training Programme from 11th to 16th July, 2016 at Bengaluru to motivate industries/prospective entrepreneurs to enter into the field of export and to enhance the exporter base of the State.**

**Training Venue: VTPC Training Hall, 'A' Block, BMTC Building, III Floor, Shanthinagar, Double Road, Bengaluru – 560 027.**

**For further details please contact Mr. C. S. Bhaskar, Programme Co-coordinator, VTPC, Bengaluru (Mob: 98809-58218)**

**babu:gpr.**

# ಮುಂಗಾರು ಹವಾಮಾನ ಆಧಾರಿತ ಬೆಳೆ ವಿಮೆ

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯದಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿಯಲ್ಲಿ ವಾರ್ಷಿಕ ಮತ್ತು ವಾಣಿಜ್ಯ ತೋಟಗಾರಿಕೆ ಬೆಳೆಗಳನ್ನು 2016 ರ ಮುಂಗಾರು ಹಂಗಾಮಿಗೆ ಗ್ರಾಮ ಪಂಚಾಯಿತಿ ಮಟ್ಟಕ್ಕೆ ಅಳವಡಿಸಿ ಅನುಷ್ಠಾನಗೊಳಿಸಲು ಸರ್ಕಾರ ಆದೇಶಿಸಿದೆ.

2016ನೇ ಮುಂಗಾರು ಅವಧಿಗೆ ಆಯಾ ಜಿಲ್ಲೆಗಳ ಪ್ರಮುಖ ಬೆಳೆಗಳ ಪೈಕಿ ತರಕಾರಿ ಬೆಳೆಗಳಾದ ಹಸಿ ಮೆಣಸಿನಕಾಯಿ (ನೀರಾವರಿ) ಹಸಿ ಮೆಣಸಿನಕಾಯಿ (ಮಳೆ ಆಶ್ರಿತ), ಹೂಕೋಸು, ಹಣ್ಣು ಬೆಳೆಗಳಾದ ಬಾಳೆ (ಅಂಗಾಂಶ) ಬಾಳಿ ಕಂದು, ಮಾವು, ದ್ರಾಕ್ಷಿ, ಸಪೋಟ, ಸೀಬೆ, ನಿಂಬೆ, ದಾಳಿಂಬೆ, ಪಪ್ಪಾಯ ಹಾಗೂ ತೋಟದ ಬೆಳೆಗಳು (ಪ್ಲಾಂಟೇಷನ್) ಬೆಳೆಗಳಾದ ತೆಂಗು, ಅಡಿಕೆ, ಶುಂಠಿ, ವಿಳ್ಯದೆಲೆ ಮತ್ತು ಕರಿಮೆಣಸು ಬೆಳೆಗಳನ್ನು ಅಧಿಸೂಚಿಸಲಾಗಿದೆ.

ಅರ್ಹತೆ ಮತ್ತು ಮಾನದಂಡಗಳೆಂದರೆ 2016 ರ ಮುಂಗಾರು ಹಂಗಾಮಿಗೆ ಅಧಿಸೂಚಿಸಲಾಗಿರುವ ಎಲ್ಲಾ ಬೆಳೆಗಳಿಗೆ ಬೆಳೆ ಸಾಲ ಪಡೆಯುವ ರೈತರನ್ನು ಕಡ್ಡಾಯವಾಗಿ ವಿಮೆಗೆ ಒಳಪಡಿಸಬೇಕಾಗಿದ್ದು ಬೆಳೆ ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿರುತ್ತದೆ. ರೈತರು ಬ್ಯಾಂಕುಗಳಿಗೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಜೂನ್ 30 ಆಗಿರುತ್ತದೆ. ಬೆಳೆ ಸಾಲ ಪಡೆಯದ ರೈತರು ನಿಗಧಿತ ಅರ್ಜಿಯೊಂದಿಗೆ ಅವರು ಹೊಂದಿರುವ ಭೂಮಿಯ ಪ್ರಸಕ್ತ ಸಾಲಿನ ದಾಖಲೆಗಳಾದ ಪಹಣಿ, ಬ್ಯಾಂಕ್ ಖಾತೆ ಪಾಸ್ ಪುಸ್ತಕ. ಆಧಾರ್ ಸಂಖ್ಯೆ ಮತ್ತು ಸ್ವಯಂಘೋಷಿತ (Self Declared) ಬೆಳೆ ವಿವರ ಸಲ್ಲಿಸುವುದು.

ಹವಾಮಾನ ಕೇಂದ್ರಗಳ ಮಾಹಿತಿಯನ್ನು ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಲಾಗುವುದು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಳವಡಿಸಲಾದ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳಲ್ಲಿ ದಾಖಲಾದ ಮಳೆಯ ಪ್ರಮಾಣ ಮತ್ತು ಹೋಬಳಿ/ತಾಲ್ಲೂಕು ಕೇಂದ್ರಗಳಲ್ಲಿ ಅಥವಾ ಹೋಬಳಿ/ತಾಲ್ಲೂಕು ಕೇಂದ್ರದ ಹತ್ತಿರದಲ್ಲಿರುವ ಹವಾಮಾನ ಕೇಂದ್ರಗಳಲ್ಲಿ ದಾಖಲಾದ ಇತರೆ ಹವಾಮಾನ ಅಂಶಗಳಾದ ತಾಪಮಾನ, ಗಾಳಿಯ ವೇಗ, ಆರ್ದ್ರತೆ ಇತ್ಯಾದಿಗಳ ಮಾಹಿತಿಯನ್ನು ಪರಿಗಣಿಸಿ ವಿಮಾ ನಷ್ಟವನ್ನು ಇತ್ಯರ್ಥಪಡಿಸಲಾಗುವುದು.

ಅಲ್ಲದೆ, ಸ್ಥಳ ನಿರ್ಧಿಷ್ಟ ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ (Hailstorm), ಭೂ ಕುಸಿತ Landslide) ಮತ್ತು ಮೇಘ ಸ್ಫೋಟ Cloud Burst) ಸಂದರ್ಭದಲ್ಲಿ ಬೆಳೆ ನಷ್ಟವುಂಟಾದರೆ ವೈಯಕ್ತಿಕ ನಷ್ಟದ ನಿರ್ಧರಣೆಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಅಧಿಸೂಚಿಸಲಾಗಿರುತ್ತದೆ.

ನಷ್ಟ ಪರಿಹಾರದ ಮೊತ್ತವನ್ನು ನೀಡಲು ಅಧಿಸೂಚಿಸಲಾದ Term sheet, Pay out structure, Duration, Index ಗಳನ್ನು ಮಾತ್ರ ಪರಿಗಣಿಸಲಾಗುವುದು.

ಯೂನಿವರ್ಸಲ್ ಸೋಂಪು ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಹಾಗೂ ಟಾಟಾ ಎ.ಐ.ಜಿ. ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ವಿಮಾ ಸಂಸ್ಥೆಗಳು, ಇಲಾಖೆ ಹಾಜರುಪಡಿಸಿದ ವಿಮಾ ಮೊತ್ತ, ವಿಮಾಕಂತಿನ ದರಗಳ ಹಾಗೂ ಬೆಳೆ ವಿಮಾ ನಷ್ಟ ಪರಿಹಾರದ ಹಂತ (Payout Structures) ಗಳನ್ನು ಅಳವಡಿಸಲು ತೀರ್ಮಾನಿಸಲಾಗಿದೆ.

ಪ್ರಸಕ್ತ 2016 ಮುಂಗಾರು ಹಂಗಾಮಿನ ಯೋಜನೆಯ ಅನುಷ್ಠಾನಕ್ಕೆ ಯೋಜನೆವಾರು, ಬೆಳೆವಾರು ರೈತರ ವಿವರಗಳನ್ನು ಆನ್‌ಲೈನ್ ಪೋರ್ಟಲ್ (Samrakshane.nic.in) ಮೂಲಕ ಹೆಚ್ಚಿನ ಸಂಖ್ಯೆಗಳಲ್ಲಿ ಸಂಬಂಧಿಸಿದ ಬ್ಯಾಂಕ್‌ಗಳಲ್ಲಿ ನೊಂದಾಯಿಸಲು ಹಾಗೂ ಯೋಜನೆಯ ಲಾಭ ಪಡೆಯಲು ರೈತರನ್ನು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಸ್ಥಳೀಯ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರು/ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು/ತಾಲ್ಲೂಕು ಮಟ್ಟದ ಅಧಿಕಾರಿಗಳು/ರೈತ ಸಂಪರ್ಕ ಕೇಂದ್ರ ಅಧಿಕಾರಿಗಳನ್ನು ಸಂಪರ್ಕಿಸಿ, ಹೆಚ್ಚಿನ ವಿವರವನ್ನು ಪಡೆದು ಅರ್ಜಿ ಸಲ್ಲಿಸಬಹುದಾಗಿದೆ.

ಬಾಬು::ಜಿಪಿಆರ್

# ಮಿಲಿಟರಿ ಪಿಂಚಣಿ ಅದಾಲತ್

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ)

ಚೆನ್ನೈನ ಕಂಟ್ರೋಲರ್ ಆಫ್ ಡಿಫೆನ್ಸ್ ಅಕೌಂಟ್ಸ್ ಅವರು ಸೈನಿಕರ ಪಿಂಚಣಿಯ ವಿಲೇವಾರಿ ಮತ್ತು ಅನುದಾನ ಕುರಿತು ಕುಂದುಕೊರತೆಗಳನ್ನು ಪರಿಹರಿಸುವುದಕ್ಕಾಗಿ ಬೆಂಗಳೂರಿನಲ್ಲಿ 2016 ರ ಸೆಪ್ಟೆಂಬರ್‌ನಲ್ಲಿ ಪಿಂಚಣಿ ಅದಾಲತ್‌ನ್ನು ನಡೆಸಲಿದೆ.

ಮಿಲಿಟರಿ ಪಿಂಚಣಿ ಬಗ್ಗೆ ಕುಂದು ಕೊರತೆಯಿದ್ದಲ್ಲಿ ಅರ್ಜಿ ನಮೂನೆಯನ್ನು **www.cdachennai.nic.in** ನ ಮೂಲಕ ಅಥವಾ ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆಯ ಜಿಲ್ಲಾ ಕಚೇರಿಗಳಲ್ಲಿ ಪಡೆದು ಅಗತ್ಯ ದಾಖಲಾತಿಗಳೊಂದಿಗೆ **The Adalat Officer, Office of the CDA, 618 Anna Salai, Teynampet, Chennai – 600 018** ಗೆ ಜುಲೈ 31 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ಬಾಬು::ಜಿಪಿಆರ್